

# ಪ್ರೀತಿ, ಡಿಜಿಟಲ್ ರೀತಿ!

**ಸಂಬಂಧಗಳ ನಡುವೆ ಮೊಬೈಲ್ ಫೋನ್ ಗೋಡೆಗಳನ್ನಷ್ಟೇ ಸೃಷ್ಟಿಸುವುದಿಲ್ಲ, ಕೆಲವೊಮ್ಮೆ ಮನಸ್ಸುಗಳನ್ನು ಆರ್ದ್ರಗೊಳಿಸುವ ಕೆಲಸವನ್ನೂ ಮಾಡುತ್ತದೆ.**

■ ಸ್ವಯಂಪ್ರಭಾ

ಡಿಜಿಟಲ್ ಲೋಕದ ಕಥೆಗಳು ಸ್ವಾರಸ್ಯಕರವಾದವು. ಆ ಕುರಿತು ಹೆಚ್ಚು ಜ್ಞಾನವಿಲ್ಲದ ಅಪ್ಪ ಅಮ್ಮನನ್ನು, ಅಜ್ಜ ಅಜ್ಜಿಯನ್ನು ಮನೆಯ ಮಕ್ಕಳು ಸುಧಾರಿಸಿಕೊಂಡು ಮುನ್ನಡೆಯುವುದನ್ನು ನೋಡುವುದು ನಿಜಕ್ಕೂ ಚಂದ.

‘ಆ್ಯಂಡ್ರಾಯಿಡ್ ಫೋನ್ ಇದ್ದರೂ ಅಜ್ಜಿಗೆ ಕೆಲವು ವಿಷಯಗಳು ಗೊತ್ತಾಗಲ್ಲ’ ಎನ್ನುತ್ತ ಅವರಿಗೆ ವಿದೇಶದಲ್ಲಿರುವ ತಮ್ಮ ಮಗನೊಡನೆ ಮಾತನಾಡಲು ವಿಡಿಯೊ ಕಾಲ್ ಮಾಡಿಕೊಡುವ ಮೊಮ್ಮಗನಿರುತ್ತಾನೆ.

ವಾಕಿಂಗ್‌ಗೆ ಜೊತೆಯಾಗುವ ಸ್ನೇಹಿತೆಯರಿಗೆ ವಿಡಿಯೊ ಕಾಲ್ ಮಾಡಿ, ‘ಕಾಲು ನೋವು ಸರಿ ಆದ ಕೂಡಲೇ ಮತ್ತೆ ವಾಕಿಂಗ್‌ಗೆ ಬರ್ತೀನಿ’ ಎಂದು ಅಜ್ಜಿ ಹೇಳಲು ಸಹಾಯ ಮಾಡುವುದು, ಅಜ್ಜಯ್ಯನಿಗೆ ಕ್ರಿಕೆಟ್ ಆ್ಯಪ್ ಡೌನ್‌ಲೋಡ್ ಮಾಡಿಕೊಡುವುದು, ಅಮ್ಮನಿಗೆ ಬಿಲ್ ಕಟ್ಟುವ ವಿಧಾನವನ್ನು ಹೇಳಿಕೊಡುವುದು – ಇವೆಲ್ಲವೂ ಮಕ್ಕಳ ಕೆಲಸಗಳೇ!

ಇತ್ತೀಚೆಗೆ ಸಂಸ್ಥೆಯೊಂದರ ಉನ್ನತ ಹುದ್ದೆಯಲ್ಲಿದ್ದ ಅಧಿಕಾರಿಯೊಬ್ಬರು, ತಮ್ಮ ಕಾರ್ ಡ್ರೈವರ್‌ಗೆ ‘ಗಾಡಿ ಸ್ವಲ್ಪ ಸೈಡ್‌ಗೆ ಹಾಕಪ್ಪ’ ಎಂದರು. ‘ಇವತ್ತು ನನ್ನ ಮಗಳು ಮತ್ತು ಅಳಿಯನ ಮದುವೆ ವಾರ್ಷಿಕೋತ್ಸವ. ಅವರಿಬ್ಬರ ವಿಡಿಯೊ ಒಂದನ್ನು ಮಗಳೇ ರೆಡಿ ಮಾಡಿಕೊಟ್ಟಿದ್ದಾಳೆ. ಅದನ್ನು ವಾಟ್ಸ್‌ಆಫ್ ಸ್ಟೇಟಸ್‌ಗೆ ಹಾಕ್ತೀಯ? ಅದನ್ನೂ ಅವಳ ಬಳಿಯೇ ಕೇಳಿದ್ರೆ ಬೈದುಬಿಡ್ತಾಳೇನೋ?’ ಎಂದರು. ಎಷ್ಟೋ ಗೂಗಲ್ ಮೀಟ್‌ಗಳು, ಕಾನ್ಫರೆನ್ಸ್‌ಗಳು, ಪಿಪಿಟಿಗಳನ್ನು ನಿಭಾಯಿಸುವ ಬಾಸ್ ಯಾಕೆ ಈ ಸಹಾಯ ಕೇಳುತ್ತಾರೆ ಎಂದು ಡ್ರೈವರ್‌ಗೆ ಅಚ್ಚರಿ.

ಹಿರಿಯ ತಲೆಮಾರು ವೃತ್ತಿಯಲ್ಲಿ ಸಂಪೂರ್ಣ ಮುಳುಗಿ, ಆ ಕ್ಷೇತ್ರಕ್ಕೆ ಬೇಕಾದ ತಂತ್ರಜ್ಞಾನ ಕೌಶಲವನ್ನಷ್ಟೇ ಕಲಿಯುತ್ತ ಸಾಗುತ್ತಾರೆ. ನಿತ್ಯದ ಸಣ್ಣ ಪುಟ್ಟ ವಿಚಾರಗಳ ಗೊಡವೆಗೇ ಅವರು ಹೋಗುವುದಿಲ್ಲ. ಡಿಜಿಟಲ್ ಲೋಕದ ಈ ವಿಷಯಗಳು ಯಾವಾಗ ಸಾಮಾಜಿಕ ಸೌಜನ್ಯದ ವ್ಯಾಪ್ತಿಗೆ ನುಸುಳಿಕೊಂಡವು ಎಂಬುದು ವೃತ್ತಿಯ ಗುಂಗಲ್ಲಿ ಮುಳುಗಿದ ಅವರ ಅರಿವಿಗೂ ಬಂದಿರುವುದಿಲ್ಲ. ಆದರೆ ಡಿಜಿಟಲ್ ಲೋಕದಲ್ಲಿಯೇ ಹುಟ್ಟಿ ಬೆಳೆದ ಮಕ್ಕಳೋ, ಇವೆಲ್ಲ ಸಾಮಾಜಿಕ ಸಮ್ಮಿಲನದ ಒಂದು ಅಭಿವ್ಯಕ್ತಿ ಮಾದರಿ ಎಂದು ಭಾವಿಸಿರುತ್ತಾರೆ. ಈ ಅಂತರವನ್ನು ನಿಭಾಯಿಸುವುದು ಒಂದು ಸೂಕ್ಷ್ಮ ಕೌಶಲವೇ ಸರಿ.

ವೃತ್ತಿಯಲ್ಲಿ, ಅಧಿಕಾರದಲ್ಲಿ ಮುಂದಕ್ಕೆ ಬಂದಮೇಲೆ ಇಂತಹ ಚಿಕ್ಕದೊಂದು ವಿಷಯವನ್ನು ಹೇಗಪ್ಪಾ ಕೇಳುವುದು ಎಂದು ಅಪ್ಪಂದಿರು, ಅಮ್ಮಂದಿರು ತಬ್ಬಿಬ್ಬಾಗುವುದುಂಟು.

ಅಪ್ಪನಿಗೆ ಇಂತಹುದೆಲ್ಲ ಗೊತ್ತಾಗುವುದಿಲ್ಲ ಎಂದು ನೇಹಾಳಿಗೆ ಗೊತ್ತಿದೆ. ಕಾಲೇಜಿಗೆ ಹೋಗುವ ಅವಳು ಅಪ್ಪನಿಗೆ ಯಾವುದೇ ರೀತಿಯಲ್ಲಿ ಬೇಸರವಾಗದಂತೆ, ಅವರು ಯಾರ ಬಳಿಯು ಸಹಾಯ ಕೇಳುವ ಸ್ಥಿತಿ ಬರದಂತೆ ತಾನೇ ಕಾಳಜಿ ವಹಿಸುತ್ತಾಳೆ. ತನ್ನ ಬರ್ತ್ ಡೇ ದಿನ ಮುಂಜಾನೆ ಅಪ್ಪನ ಮೊಬೈಲ್‌ನಲ್ಲಿ ತಾನೇ ಸಿದ್ಧಪಡಿಸಿಟ್ಟ ವಿಡಿಯೊವನ್ನು ಅಪ್‌ಲೋಡ್ ಮಾಡಿ, ‘ಮಗಳೇ ಶುಭಾಶಯಗಳು’ ಎಂದು ಅಪ್ಪನ ಶೈಲಿಯಲ್ಲಿಯೇ ಒಂದು ಸಾಲು ಬರೆದುಬಿಡುತ್ತಾಳೆ. ಅಪ್ಪ ಅಮ್ಮನ ಮದುವೆ ವಾರ್ಷಿಕೋತ್ಸವಕ್ಕೆಂದು, ಅಪ್ಪನ ದೃಷ್ಟಿಕೋನದಿಂದ ಒಂದು ವಿಡಿಯೊ, ಅಮ್ಮನ ದೃಷ್ಟಿಕೋನದಿಂದ ಮತ್ತೊಂದು ವಿಡಿಯೊ ಮಾಡಿಕೊಡುವಳು. ಅಷ್ಟೇ ಅಲ್ಲದೆ, ಅಪ್ಪನಿಗೆ ಆ ದಿನ ಮುಂಜಾನೆ ನೆನಪಿಸುತ್ತಾಳೆ. ಈ ಎಲ್ಲ ಪ್ರಕ್ರಿಯೆಯೂ ಪ್ರೀತಿಯ ಬಂಧದೊಳಗೇ ಒಬ್ಬರಿಗೊಬ್ಬರು ತಮಾಷೆ ಮಾಡಿಕೊಳ್ಳುತ್ತ, ಅಮ್ಮನೊಡನೆ ಸೇರಿ ಅಪ್ಪನ ಗೋಳು ಹೊಯ್ದುಕೊಳ್ಳುತ್ತ ನಡೆಯುತ್ತದೆ. ತಮಗಾಗಿ ದುಡಿಯುವ ಹಿರಿಯರನ್ನು ಕೈ ಹಿಡಿದು ನಡೆಸುವ ಪೋಷಕರ ಸಾಲಿನಲ್ಲಿ ಮಕ್ಕಳು ನಿಂತುಬಿಡುತ್ತಾರೆ.

ಪಿಯುಸಿ ಓದುತ್ತಿರುವ ಆಕರ್ಷ್ ಒಮ್ಮೆ, ಅಮ್ಮನ ಮದುವೆ ವಾರ್ಷಿಕೋತ್ಸವದಂದು – ‘ಫೇಸ್ ಬುಕ್‌ಗೆ ಫೋಟೊ ಹಾಕಮ್ಮಾ’ ಎಂದು ದುಂಬಾಲು ಬಿದ್ದ. ಹೊಸ ಸೀರೆ, ಬಳೆ, ಹೊಸ ಪ್ರವಾಸ ಎಂದೆಲ್ಲ ರಾಶಿ ರಾಶಿ ಫೋಟೊಗಳನ್ನು ಅಪ್‌ಲೋಡ್ ಮಾಡುವ ಅಮ್ಮ, ತನ್ನ ಮದುವೆ ವಾರ್ಷಿಕೋತ್ಸವದಂದು ಯಾಕೆ ಫೋಟೊ ಹಾಕುವುದಿಲ್ಲ ಎಂದು ಅವನಿಗೆ ಅಚ್ಚರಿ. ‘ಶೀ, ನಂದೇ ಮದುವೆ ವಾರ್ಷಿಕೋತ್ಸವ ಅಂತ ಕೊಚ್ಚಿಕೊಳ್ಳೋದಾ’ ಎಂದು ಹೇಳುವ ಅಮ್ಮನನ್ನು ಕಂಡು ಅವನಿಗೆ ನಗು. ಹೇಗೋ ಫೋಟೊ ಅಪ್‌ಲೋಡ್ ಮಾಡಿ, ‘ಒಂದೆರಡು ಸಾಲು ಬರಿ ಅಮ್ಮಾ’ ಎಂದರೆ ಅಮ್ಮ ಬೇಡವೆಂದು ಮತ್ತೆ ಸಿಡುಕಿದಳು. ಕೊನೆಗೂ ಅಪ್ಪನ ಬಗ್ಗೆ ಅಮ್ಮ ಒಂದೆರಡು ಸಾಲುಗಳನ್ನು ಟೈಪ್ ಮಾಡುವಂತೆ ಪ್ರೋತ್ಸಾಹಿಸಿದ. ಅಥವಾ ಅಮ್ಮನ ಮಾತುಗಳನ್ನು ತಾನೇ ಅಲ್ಲಿ ಟೈಪ್ ಮಾಡಿದನೆನ್ನಿ. ಅದನ್ನು ಅಪ್ಪನಿಗೆ ಟ್ಯಾಗ್ ಮಾಡಿ ಕಣ್ಣು ಹೊಡೆದ.

ಮೂರೋ ನಾಲ್ಕೋ ಜನರಿರುವ ಕುಟುಂಬದಲ್ಲಿ ಇಂತಹ ಒಂದು ಬಂಧವನ್ನು ಗಮನಿಸುವಾಗ ಖುಷಿಯೆನಿಸುತ್ತದೆ. ಎಷ್ಟೊ ಬಾರಿ, ‘ಮೊಬೈಲ್ ಸಂಬಂಧಗಳನ್ನು ಹಾಳು ಮಾಡಿತು’ ಅನ್ನಿಸಿದರೂ, ಇಂತಹ ಆಪ್ತ ಕ್ಷಣಗಳು ಡಿಜಿಟಲ್ ಜಗಲಿಯಲ್ಲಿವೆ.

ಪ್ರತಿಕ್ರಿಯಿಸಿ: feedback@sudha.co.in